OS No. 13/2022

DW-3

**(ಇಂದು ದಿಃ 23-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಪಾಟೀ ಸವಾಲುಃ- ವಾದಿ ಪರ ಶ್ರೀ. ಎಸ್ ಕೆ ಡಿ ವಕೀಲರಿಂದಃ-**

1ನೇ ಪ್ರತಿವಾದಿಯ ಮೊದಲ ಹೆಂಡತಿ 3ನೇ ವಾದಿ ಎಂದರೆ ನನಗೆ ಗೊತ್ತಿಲ್ಲ. 2ನೇ ವಾದಿ ನನಗೆ ಪರಿಚಯ ಇಲ್ಲ. ನಾನು ಕೊಡ್ಲಾ ನಿವಾಸಿ. 1ನೇ ಪ್ರತಿವಾದಿಗೆ ಮಾಹಾದೇವಮ್ಮ ಒಬ್ಬಳೆ ಹೆಂಡತಿ. 3ನೇ ವಾದಿ 1ನೇ ಪ್ರತಿವಾದಿಯ ಮೊದಲ ಹೆಂಡತಿ ಅಂದರೆ ಸರಿಯಲ್ಲ. 1ನೇ ಪ್ರತಿವಾದಿ ಕರೆಪ್ಪನ ಸ್ವಂತ ಮಗ. ಕರೆಪ್ಪನ ತಂದೆಯ ಹೆಸರು ಭೀಮಪ್ಪ. ದಾವಾ ಜಮೀನುಗಳು ಭೀಮಪ್ಪನ ಕಡೆಯಿಂದ ಬಂದ ಜಮೀನುಗಳು ಎಂದರೆ ಸರಿ. ದಾವಾ ಜಮೀನುಗಳು ಫಲವತ್ತಾದ ಜಮೀನುಗಳು ಎಂದರೆ ಸರಿಯಲ್ಲ. ಅಲ್ಲಿ 1 ಎಕರೆ ಜಮೀನಿಗೆ ಕನಿಷ್ಟ ಇಪತ್ತು ಲಕ್ಷ ಬೆಲೆ ಬಾಳುತ್ತದೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ತನ್ನ ಮಗಳ ಮದುವೆಗಾಗಿ ಜಮೀನು ಮಾರಾಟ ಮಾಡಿದ್ದಾರೆ. ಮಗಳ ಹೆಸರು ನನಗೆ ಗೊತ್ತಿಲ್ಲ. ಸದರಿ ಮದುವೆ 2012ರಲ್ಲಿ ಆಗಿದೆ. ಖರೀದಿ ಪತ್ರದಲ್ಲಿ ಮಗಳ ಮದುವೆಗೆ ಎಂದು ನಮೂದು ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಕಡಿಮೆ ಬೆಲೆಗೆ ಜಮೀನು ಖರೀದಿ ಮಾಡಿದ್ದೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಮಾತು ಕೇಳಿಕೊಂಡು 3ನೇ ವಾದಿ 1ನೇ ಪ್ರತಿವಾದಿಯ ಹೆಂಡತಿ ಅಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**